ಸುಕ್ಕರಿ ಅವರಿವರ ಮನೆಯಲ್ಲಿ ಬಾಣಂತನ ಮಾಡುತ್ತ, ಬ್ಯಾಲೆಯಲ್ಲಿ ಕಡಿಮೆ ಕಿಮ್ಮತ್ತಿಗೆ ಕೊಂಡ ಮೀನುಗಳನ್ನು ಕುಮಟೆಗೆ ಒಯ್ದು ಹೆಚ್ಚಿನ ದರಕ್ಕೆ ಮಾರುತ್ತ ಮಹೇಶನಿಗೆ ನಾಕಕ್ಷರ ಕಲಿಸಿದಳು. ಮಹೇಶನೂ ಹೇಳಿ ಕೇಳಿ ಮಹೇಶನೇ. ಕಣ್ಣಲ್ಲಿ ರಕ್ತವಿಲ್ಲದವನಂತೆ ಅವ್ವಿಯ ದುಡಿತಕ್ಕೆ ಬೆಲೆಕೊಡದೆ ಒಂದೇ ಪಟ್ಟ ಹಿಡಿದು ಕಾಲೇಜನ್ನೇ ಮುಗಿಸಿದ್ದ. ಡಿಗ್ರಿ ಮುಗಿಸಿದ ಮೇಲೆ ಬೋಟಿಗೆ ಹೋಗಲು ಸರಿ ಎನ್ನಿಸದೆ, ತನ್ನ ಯೋಗ್ಯತೆಗೆ ತಕ್ಕ ನೌಕರಿಗಾಗಿ ಕಾಯುತ್ತ ತೋರಣ ಕಟ್ಟುತ್ತ ದಿನ ಕಳೆಯುತ್ತಿದ್ದ. ನೌಕರಿ ದಕ್ಕುವ ಯಾವ ಘನಂದಾರಿಕೆಯೂ ಅವನಲ್ಲಿಲ್ಲದ ಕಾರಣ ದಿನಕಳೆದಂತೆ ಅಮ್ಮನವರ ಪಲ್ಲಕ್ಕಿಯಿರಲಿ, ಹಣ್ಣೆಮಠದ ಗಣಪತಿ ದೇವರದ್ದೋ, ತೆಪ್ಪದ ನರಸಿಂಹ ಸ್ವಾಮಿಯ ಪಲ್ಲಕ್ಕಿ ಏಳಲಿ, ಓಣಜಿಗೊಂದಿಷ್ಟು ತೋರಣ ಕಟ್ಟಿ, ಪಲ್ಲಕ್ಕಿ ಮುಂದೆ ಕಾಣಿಕೆ ಡಬ್ಬಿ ಹಿಡಿದು ಯಾವತ್ತೂ ಮುಂದಿರುವುದನ್ನು ರೂಢಿಸಿಕೊಂಡಿದ್ದ.

ಅದೇ ಮಹೇಶ ಅಂದು ಬೆಳಿಗ್ಗೆ ಕುಮಟೆಗೆ ಹೊರಟು ನಿಂತಾಗ ಸುಕ್ಕರಿಯ ಬೈತಲೆಯ ನಡುವೆ ಪುರುಪುರು ಓಡಾಡುತ್ತಿದ್ದ ಹೇನುಗಳನ್ನು ಹಿಡಿದು ಆಜನ್ಮ ಶತ್ರುಗಳನ್ನು ಹಿಸುಕುವಂತೆ ಎಂಜಲು ತುಂಬಿದ ಬಾಯಲ್ಲಿ 'ಸೀಸೀ' ಎಂದು ಸಪ್ಪಳ ಮಾಡುತ್ತ ಲಕ್ಷ್ಮಿ ವರೆಯುತ್ತಿದ್ದರೆ,

'ಅರ್ರೆ, ಇವತ್ತು ಕುಮಟೆ ಬಂದ್ ಅದೆ, ಗಲಾಟೆ ಬೇರೆ ಅದೆಯಂತೆ. ನೀ ಎಲ್ಲಿಗೆ ಬೆಳಬೆಳಗ್ಗೆ ರಮಾಣಿ ಆಗಿ ಹೊರಟೆ ಮಾರಾಯಾ? ಇವತ್ತು ಒಂದು ಗಾಡಿಯೂ ಓಡಾಡುದಿಲ್ಲ ಕಾಣ್ತದೆ, ಹೋದ್ರೆ ಬರೂದು ಕಷ್ಟ, ಬಂದ್ರೆ ಹೋಗೂದು ಕಷ್ಟ' ಎಂದು ಅರೆತೆರೆದ ಕಣ್ಣಿನಲ್ಲಿಯೇ ಮಹೇಶನನ್ನು ಕಂಡು ಸುಕ್ಕರಿ ಕೇಳಿದಳು.

'ಎಲ್ಲಿ ಹೋಗುದಾದ್ರೂ ನಿಂಗೆ ಹೇಳೇ ಹೋಗ್ಬೇಕು ಹೇಳಿ ಅದ್ಯನೆ ಮಾರಾಯ್ತಿ, ನೀ ಬಾಯ್ತೆಗದ್ರೆ ಕೆಲ್ಸ ಕೆಟ್ಟಾಂಗೇಯಾ' ಎಂದು ಐದು ನಿಮಿಷ ಬಿಟ್ಟು ಹೊರಡಲು ಹೊಳ್ಳಿಯ ಮೇಲೆ ಕುಳಿತ ಮಹೇಶ.

'ಹೆದರ್ಬೇಡ್ವೆ, ನಾ ಕುಮಟೆಗೆ ಹೋಗ್ತವಲ್ಲ. ನಂಗೆ ಪಾಚನದಲ್ಲಿ ಹೋಗ್ಬರು ಕೆಲ್ಸ ಅದೆ. ಬರೂಕೆ ತಡ ಆದ್ರೂ ಆಯ್ತು...' ಎಂದು ಸಮಜಾಯಿಷಿ ಕೊಡುತ್ತಿದ್ದ ಮಹೇಶನಿಗೆ ಭೂಷಣನ ಗೂಡ್ಸ್ ಗಾಡಿ ಹೇಳಿದ ಸಮಯಕ್ಕೆ ಬರಲಿಲ್ಲವೆಂದು ಗಡಿಬಿಡಿಯೂ ಆಗುತ್ತಿತ್ತು.

ಹೇನು ಹಿಡಿಸಿಕೊಳ್ಳುತ್ತ ಧ್ಯಾನಸ್ಥಳಾಗಿದ್ದ ಸುಕ್ಕರಿ, 'ಸಾವುಕೆ, ಏಡ್ ದಿನದಿಂದ ಮೀನು ಮಾರುಕೆ ಕುಮಟೆಗೆ ಹೋಗ್ಬಂದದ್ದೇಯಾ, ಪ್ಯಾಟೇಲಿ ಯಾರೂ ಮದ್ಲಿನ ಹಾಂಗೇ ಓಡಾಡ್ತಾನೆ ಇರ್ಲಿಲ್ಲ. ಎಲ್ರೂ ಗುರ್ತಿಲ್ಲದವರಾಂಗೆ ಇದ್ರಪ. ಮೀನು ಕೊಂಬುದು ಸಾಯ್ಲಿ, ಗಟ್ಟಿ ಹೆಜ್ಜೆ ಇಟ್ಟು ಓಡಾಡೂದಿಲ್ಲ ಅಂತ್ರು ಮಂದಿ.'

ಲಕ್ಷ್ಮಿ ಹೌದೌದು ಎಂದು ಕುತ್ತಿಗೆ ಆಡಿಸಿ, 'ಎಂತಕ್ಕೆ ಗಲಾಟೆ ಹೇಳೇ ಕಡೀವರಿಗೂ ತಿಳೀಲಿಲ್ಲ. ಟೀವಿಯವ್ರು ಹೇಳದ್ರ ಪ್ರಕಾರ, ಯಾದ್ರೋ ಕೊಲೆ ಆಗದೆ, ಅದ್ಕಾಗಿಂದೇ ಗಲಾಟಿ ಹೇಳಿ. ಲಕ್ಷ್ಮಣ ಹೇಳ್ದಾಂಗೆ, ಕೊಲೆ ಆದದ್ದು ಹೌದು, ಆದ್ರೆ ಕೊಲೆ ಮಾಡ್ದವ್ರು ಆರಾಮಾಗಿ ಓಡಾಡ್ಕಂಡವ್ರೆ, ಪೊಲೀಸ್ನೋರು ಅವ್ರನ್ನ ಹಿಡೀಲಿಲ್ಲ ಹೇಳಿ ಗಲಾಟೆಯಂತೆ. ಎಂತದೇ ಆಗ್ಲಿ, ಸುಕ್ರಕ್ಕ, ಗಲಾಟೆ ಮಾಡಿ ಜೈಲಿಗೆ ಹೋದ್ರೆ ಅವ್ರ ನಂಬ್ಕಂಡವ್ರ ಗತಿ ಎಂತದು ಹೇಳು. ಸುಮ್ಮನೆ ಪೊಲೀಸ್ರು ಬರ್ಲಿಲ್ಲಂತೆ ಇವತ್ತಿಗೆ ಹೇಳಿ. ಬೇರ್ಬೇರೆ ಊರಿಂದ ಪೊಲೀಸ್ನೋರ ಕರ್ಸಾರಂತೆ. ಅವ್ರು ಗಲಾಟೆ ಮಾಡ್ಲಿಕ್ಕೆ ಬಂದವ್ರ ಮುಖ ಮುಸುಡು ನೋಡದ್ದೇಯಾ ಜಪ್ಪುದಂತೆ' ಎಂದು ನೆಮ್ಮದಿಯಿಂದ ಹೇನು ಹೆಕ್ಕುವ, ವರೆಯುವ ಕೆಲಸದಲ್ಲಿದ್ದ ಲಕ್ಷ್ಮಿ, ಸುಕ್ಕರಿಯ ತಲೆಯೊಳಗೆ ಹುಳಬಿಟ್ಟಳು.

ಮಹೇಶ ರಮಾಣಿ ಆಗಿ ಹೊರಟಿದ್ದು ನೋಡಿದರೆ ಹೊಡೆದಾಡಲು ಹೊರಟ ಹಾಗೆ ಕಾಣಿಸುತ್ತಿರಲಿಲ್ಲವಾದರೂ ಸುಕ್ಕರಿಗೆ ಒಳಗೊಳಗೇ ಡುಕಡುಕಿ. ಮೊದಲೇ ಊರಮೇಲಿನ